ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ರಾಜ್ಯದಿಂದ ಪ್ರತಿ ವರ್ಷ ಹಜ್ ಯಾತ್ರೆ ಮಾಡುವವರ ಸಂಖ್ಯೆ 3500 ರಿಂದ 4500

ಆ) ಸರ್ಕಾರವು ಈ ಕೆಳಕಂಡಂತಹ ಅನುಕೂಲಗಳನ್ನು ಹಜ್ ಯಾತ್ರಿಕರಿಗೆ ಕಲ್ಪಿಸುತ್ತದೆ.

1) ಕರ್ನಾಟಕ ರಾಜ್ಯ ಹಜ್ ಸಮಿತಿಯು ಉಚಿತವಾಗಿ ಅರ್ಜಿಗಳನ್ನು ಒದಗಿಸುತ್ತದೆ.

2) ಹಜ್‌ಯಾತ್ರಿಗಳಿಗೆ ಉಚಿತವಾಗಿ ಕಾಲರ ಮತ್ತು ಮೆನಂಜಿಟೀಸ್ ಚುಚ್ಚುಮದ್ದುಗಳನ್ನು ಹಾಕಿಸಲಾಗುವುದು ಮತ್ತು ತರಬೇತಿಯನ್ನು ನೀಡಲಾಗುವುದು.

3) ಹಜ್ ಕ್ಯಾಂಪ್‌ನಲ್ಲಿ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ನೀಡಲಾಗುತ್ತದೆ. ಹಾಗೂ ಹಜ್ ಕ್ಯಾಂಪ್‌ನಿಂದ ವಿಮಾನ ನಿಲ್ದಾಣಕ್ಕೆ ಉಚಿತ ವಾಹನ ಸೌಕರ್ಯ.

4) ಇಮಿಗ್ರೇಷನ್ ಮತ್ತು ಕಸ್ಟಮ್ಸ್ ಕ್ಲಿಯರೆನ್ಸ್‌ಗಳಿಗಾಗಿ ಕ್ಯಾಂಪಿನಲ್ಲಿ ವ್ಯವಸ್ಥೆ ಮಾಡಲಾಗುತ್ತದೆ.

ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು.

2171 (2726)

ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯೋಜನೆಗಳು ಯಾವುವು?

ಆ) ಹಮ್ಮಿಕೊಳ್ಳಲಾಗಿರುವ ಎಲ್ಲಾ ಯೋಜನೆಗಳು ಕಾರ್ಯಗತಗೊಂಡಿದಯೇ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಆರ್.ರೋಷನ್ ಬೇಗ್(ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಇಲಾಖೆಯು ಈ ಕೆಳಕಂಡ ಕಾರ್ಯಕ್ರಮ: ಯೋಜನೆಗಳನ್ನು ಹಮ್ಮಿಕೊಂಡಿದೆ.

1. ರಾಜ್ಯದ ವಿವಿಧ ಪ್ರವಾಸಿ ಕೇಂದ್ರಗಳಲ್ಲಿ ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರದ ನೆರವಿನೊಂದಿಗೆ ಒಟ್ಟು 150 ಯೋಜನೆ (ಕಳೆದ ಸಾಲಿನ ಅಂತ್ಯದವರೆಗೆ ಸೇರಿ)ಗಳನ್ನು ಕೈಗೊಳ್ಳಲಾಗಿದೆ. ಹಾಗೂ ಕೇಂದ್ರವು ಈ ಯೋಜನೆಗಳಿಗಾಗಿ 2544 ಲಕ್ಷ ರೂಗಳಿಗೆ ಮಂಜೂರಾತಿ ನೀಡಿ 1635 ಲಕ್ಷ ರೂ ಬಿಡುಗಡೆ ಮಾಡಿರುತ್ತದೆ.

2. ಖಾಸಗೀ ಉದ್ಯಮಿಗಳನ್ನು ಪ್ರವಾಸೋದ್ಯಮ ರಂಗದಲ್ಲಿ ಬಂಡವಾಳ ಹೂಡುವಂತೆ ಉತ್ತೇಜಿಸಲು ಕರ್ನಾಟಕ ಸರ್ಕಾರವು ಪ್ರವಾಸೋದ್ಯಮ ನೀತಿಯನ್ನು ಜಾರಿಗೊಳಿಸಿದೆ.

3. ರಾಜ್ಯದ ಆಕರ್ಷಣೆಗಳ ಬಗ್ಗೆ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ಪ್ರವಾಸೋದ್ಯಮ ಮೇಳಗಳು: ವಸ್ತುಪ್ರದರ್ಶನಗಳು ಮತ್ತು ಸಮಾವೇಶಗಳಲ್ಲಿ ಇಲಾಖೆಯು ಭಾಗವಹಿಸಿ, ಹೆಚ್ಚಿನ ಸಂಖ್ಯೆಯ ದೇಶೀಯ ಹಾಗೂ ವಿದೇಶೀಯ ಪ್ರವಾಸಿಗರನ್ನು ಆಕರ್ಷಿಸಲು ಕ್ರಮ ಕೈಗೊಳ್ಳಲಾಗಿದೆ.

4. ರಾಜ್ಯದ ಪ್ರವಾಸಿ ಕೇಂದ್ರಗಳ ಬಗ್ಗೆ ಸೂಕ್ತ ಮಾಹಿತಿ ಒದಗಿಸಲು ಎಲ್ಲ ಪ್ರೇಕ್ಷಣೀಯ ಸ್ಥಳ ವಿವರವುಳ್ಳ ಪ್ರವಾಸಿ ಮಾಹಿತಿ ಕೈಪಡಿಗಳು: ನಕ್ಷೆಗಳು ಮುಂತಾದ ಪ್ರಚಾರ ಸಾಮಾಗ್ರಿಗಳನ್ನು ಮುದ್ರಿಸಿ ವಿತರಿಸಲಾಗುತ್ತಿದೆ ಅಲ್ಲದೆ ಅಧುನಿಕ ತಂತ್ರಜ್ಞಾನದ ಮೇಲೆ ಸಿ.ಡಿ.ರೋಮ್ ವೆಬ್ ಸೈಟು ವಿ.ಹೆಚ್.ಎಸ್. ಕ್ಯಾಸೆಟ್ಟುಗಳ ಮೂಲಕವೂ ಪ್ರಚಾರವನ್ನು ನೀಡಲಾಗುತ್ತಿದೆ.

5. ರಾಜ್ಯದ ಆಕರ್ಷಣೆಗಳ ಬಗೆ ಪ್ರಚಾರ ನೀಡಲು ದೇಶೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ಮ್ಯಾಗ್‌ಜೈನ್‌ಗಳಲ್ಲಿ ವೃತ್ತಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಆಗಿಂದಾಗ್ಗೆ ನೀಡಲಾಗುತ್ತಿದೆ.

6. ರಾಜ್ಯದ ಸಂಸ್ಕೃತಿ ಪರಂಪರೆಯ ಬಗ್ಗೆ ಪ್ರವಾಸಿಗರಿಗೆ ಪರಿಚಯಿಸಲು ಜಿಲ್ಲಾ ಆಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ರಾಜ್ಯದ ವಿವಿಧೆಡೆಗಳಲ್ಲಿ ಉತ್ಸವಗಳನ್ನು ಆಚರಿಸಲಾಗುತ್ತಿದೆ.

7. ರಾಜ್ಯದ ಪ್ರಮುಖ ಪ್ರವಾಸಿ ಸ್ಥಳಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ತಜ್ಞ ಸಂಸ್ಥೆಗಳಿಂದ ಅಧ್ಯಯನ ವರದಿಯನ್ನು ಪಡೆಯಲು ಕ್ರಮಕೈಗೊಳ್ಳಲಾಗಿದೆ.

8. ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಇಲಾಖೆಯು ವಿಶೇಷ ಯೋಜನೆಗಳನ್ನು ಕೈಗೊಂಡಿದ್ದು ಈಗಾಗಲೇ ಕೆಲವು ಯೋಜನೆಗಳನ್ನು

ಪೂರ್ಣಗೊಳಿಸಲಾಗಿದೆ.

ಆ) ರಾಜ್ಯ ಪ್ರವಾಸೋದ್ಯಮವು ಕೇಂದ್ರ ನೆರವಿನೊಂದಿಗೆ ಕೈಗೊಂಡಿರುವ 150 ಯೋಜನೆಗಳ ಪೈಕಿ 1999-2000ನೇ ಸಾಲಿನ ಅಂತ್ಯದಲ್ಲಿ ಮಂಜೂರಾತಿ ನೀಡಲಾದ 35 ಯೋಜನೆಗಳನ್ನು ಒಳಗೊಂಡಿರುತ್ತವೆ. ಈ ಯೋಜನೆಗಳಲ್ಲಿ ಒಟ್ಟು 84 ಯೋಜನೆಗಳು ಪೂರ್ಣಗೊಂಡಿವೆ. ಉಳಿದ ಯೋಜನೆಗಳು ನಿರ್ಮಾಣದ ವಿವಿಧ ಹಂತದಲ್ಲಿವೆ.

ಪ್ರವಾಸೋದ್ಯಮ ನೀತಿಯು ಜಾರಿಗೆ ಬಂದ ನಂತರ ಖಾಸಗೀ ಉದ್ಯಮದಾರರಿಂದ ರಾಜ್ಯದಲ್ಲಿ ಒಟ್ಟು 1151.88 ಕೋಟಿ ಬಂಡವಾಳ ಹೂಡಿಕೆಯ 467 ಯೋಜನೆಗಳು ಅನುಮೋದನೆ ಆಗಿದ್ದು ಈ ಪೈಕಿ 168 ಯೋಜನೆಗಳು ಪೂರ್ಣಗೊಂಡಿವೆ. ಇದಕ್ಕಾಗಿ 14.63 ಕೋಟಿ ರೂ ಸಹಾಯಧನವನ್ನು ಸರ್ಕಾರದಿಂದ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ರಾಜ್ಯದ ಕಾರ್ಮಿಕ ಪ್ರಕರಣಗಳ ಬಗ್ಗೆ

೨೧೭೨(೨೭೨೭)

ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕಾರ್ಮಿಕ ಇಲಾಖೆಯಲ್ಲಿ ಇತ್ಯರ್ಥವಾಗದೆ ಇರುವ ಪ್ರಕರಣಗಳ ಸಂಖ್ಯೆ: ಎಷ್ಟು? ಅವು ಯಾವುವು?

ಆ. ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಒಂದು ಅಥವಾ ಎರಡು ವರ್ಷಗಳೊಳಗಾಗಿ ಇತ್ಯರ್ಥಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಇ. ಎಲ್ಲಾ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಬೇಕಾಗಿರುವ ಕಾಲಾವಧಿ ಎಷ್ಟು?

ಶ್ರೀ ಎ.ಎಂ.ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

ಅ. ಕಾರ್ಮಿಕ ಇಲಾಖೆಯಲ್ಲಿ ಇತ್ಯರ್ಥವಾಗದೆ ಇರುವ ಪ್ರಕರಣಗಳ ಸಂಖ್ಯೆ: 7864 ಇದರಲ್ಲಿ 7000 ಪ್ರಕರಣಗಳು ಕಾರ್ಮಿಕ ನಷ್ಟ ಪರಿಹಾರಕ್ಕೆ ಸಂಬಂಧಿಸಿದ ಪ್ರಕರಣಗಳಾಗಿದ್ದು, ಉಳಿದ 864 ಕೈಗಾರಿಕಾ ವಿವಾದ ಪ್ರಕರಣಗಳಾಗಿರುತ್ತವೆ.